

ಬಾಲಿವುಡ್‌ನ ಆಸ್ಥಾನದಲ್ಲಿ ದಕ್ಷಿಣದ ಹುಡುಗನೊಬ್ಬ ನುಗ್ಗಿ ಸಿಂಹಾಸನ ಹಾಕಿ ಕೂತಿದ್ದು ಅಲ್ಲಿನ ಸ್ಟಾರ್‌ಗಳಿಗೆ ಇನ್ನೂ ಅರಗಿಸಿಕೊಳ್ಳಲಾಗುತ್ತಿಲ್ಲ



‘ತೆಲುಗು, ಕನ್ನಡ ಸಿನಿಮಾಗಳು ಕೊರೊನಾ ಸೋಂಕಿನ ರೀತಿ ಬಾಲಿವುಡ್‌ಗೆ ತಗುಲಿವೆ. ಬಾಲಿವುಡ್ ಹೊಸ ಲಸಿಕೆಯನ್ನು ಕಂಡುಕೊಂಡು ಮತ್ತೆ ಮೈ ಕೊಡವಿ ಮೇಲೇಳುವುದೆಂದು ಭಾವಿಸುವೆ.’

ನಿರ್ದೇಶಕ ರಾಮ್‌ಗೋಪಾಲ್ ವರ್ಮಾ ಟ್ವೀಟ್‌ನಲ್ಲಿ ವಿನೋದ–ವ್ಯಂಗ್ಯವಷ್ಟೇ ಇಲ್ಲ. ಅವರ ಮಾತು, ಭಾರತೀಯ ಚಿತ್ರರಂಗದಲ್ಲಿ ಆಗಿರುವ ಬದಲಾವಣೆಗಳನ್ನೂ ಸೂಚಿಸುವಂತಿದೆ; ಭಾರತೀಯ ಸಿನಿಮಾ ಎಂದರೆ ತಾನೇ ಎಂದು ಬೀಗುತ್ತಿದ್ದ ಬಾಲಿವುಡ್‌ಗೆ ಬಿದ್ದಿರುವ ಪೆಟ್ಟನ್ನು ಹೇಳುತ್ತಿರುವಂತಿದೆ.

ಮೂರನೇ ಅಲೆಯ ಕೋವಿಡ್ ಕಾರ್ಮೋಡಗಳು ಸರಿದ ನಂತರ ತೆರೆಕಂಡ ‘ಪುಷ್ಪಾ–ದಿ ರೈಸ್’ ತೆಲುಗು ಚಿತ್ರವು ಮನರಂಜನೆಯ ಮಕರಂದ ಸುರಿಸಿದ್ದನ್ನು ಕಂಡೆವು. ಆಮೇಲೆ ‘ಆರ್‌ಆರ್‌ಆರ್’ನ ರಾಜಮೌಳಿ ಶೈಲಿಯ ದೃಶ್ಯವೈಭವ. ಈಗ ‘ಕೆಜಿಎಫ್–2’ ಕನ್ನಡ ಸಿನಿಮಾ ಬಾಲಿವುಡ್ ಓಣಿಯಲ್ಲೂ ಅನುರಣಿಸುತ್ತಿರುವುದರಿಂದ ರಾಮ್‌ಗೋಪಾಲ್ ವರ್ಮಾ ಮಾತಿನ ವ್ಯಂಗ್ಯೋಕ್ತಿಗೆ ತೂಕವಿದೆ. ಈ ಮೂರು ಚಿತ್ರಗಳ ಗೆಲುವು ಬಾಲಿವುಡ್ ಮುಟ್ಟಿನೋಡಿಕೊಳ್ಳುವಂತಹ ಪೆಟ್ಟು ಎಂದು ವಿಶ್ಲೇಷಿಸುತ್ತಿರುವವರೂ ಇದ್ದಾರೆ.

ದಶಕಗಳ ಹಿಂದೆಯೇ ತೆಲುಗಿನಲ್ಲಿನ ತಮ್ಮ ಸಿನಿಮಾ ಇನಿಂಗ್ಸ್ ಮೂಲಕ ಹಿಂದಿ ಚಿತ್ರರಂಗದ ತಾರಾನಟರು ತಮ್ಮತ್ತ ನೋಡುವಂತೆ ಮಾಡಿದ್ದವರು ಇದೇ ರಾಮ್‌ಗೋಪಾಲ್. ಅವರನ್ನು ಹಿಂದಿ ಚಿತ್ರರಂಗದವರು ರಾಮ್‌ಗೋಪಾಲ್ ಎಂದದ್ದಕ್ಕಿಂತ ‘ವರ್ಮಾ’ ಎಂದು ಗುರುತಿಸಿದ್ದೇ ಹೆಚ್ಚು. ಚಕಚಕನೆ ಅವರು 1990ರ ದಶಕದ ಆದಿಯಲ್ಲಿ ಹಿಂದಿ ಚಿತ್ರರಂಗದವರನ್ನು ಆಕರ್ಷಿಸಿದ್ದರು. ತೆಲುಗಿನಲ್ಲಿ ಮಾಡಿದ ಚಿತ್ರಗಳನ್ನು ಹಿಂದಿಯಲ್ಲಿಯೂ ಕೊಡಬೇಕೆಂಬ ಮಹತ್ವಾಕಾಂಕ್ಷೆ ಅವರಲ್ಲಿ ಆಗಲೇ ಇತ್ತು. ಅವರ ನಿರ್ದೇಶನದ ಮೊದಲ ಸಿನಿಮಾ ‘ಶಿವ’ ಅದೇ ಹೆಸರಿನಲ್ಲಿ ಹಿಂದಿಗೆ ರೀಮೇಕ್ ಆಗಿತ್ತು. ಮೂಲ ಚಿತ್ರದ ನಾಯಕ ನಾಗಾರ್ಜುನ ಅವರೇ ಹಿಂದಿಯಲ್ಲೂ ಅಭಿನಯಿಸಿದ್ದು ಗಮನಾರ್ಹ.

ಬಾಲಿವುಡ್‌ಗೆ ಪ್ರವೇಶಿಸಿದ ಐದಾರು ವರ್ಷಗಳಲ್ಲಿಯೇ ವರ್ಮಾ ಪ್ರಭಾವಿ ಎನಿಸಿಕೊಂಡರು. ಈಗ ರಾಜಮೌಳಿ ನಿರ್ದೇಶನದ ತೆಲುಗು ಚಿತ್ರಗಳಿಗೆ ಕಾಯಂ ಸಂಗೀತ ನೀಡುತ್ತಿರುವ ಎಂ.ಎಂ. ಕೀರವಾಣಿ ಅವರಿಂದ ಆಗಲೇ ತಮ್ಮ ಚಿತ್ರಗಳ ಹಾಡುಗಳಿಗೆ ಮಟ್ಟು ಹಾಕಿಸಿದ್ದವರು ವರ್ಮಾ (ವರ್ಮಾ ನಿರ್ದೇಶನದ ‘ಕ್ಷಣ ಕ್ಷಣಂ’ ತೆಲುಗು ಸಿನಿಮಾದ ‘ಜಾಮು ರಾತಿರಿ’ ಹಾಡಿನ ಲಾಲಿತ್ಯ ಹಾಗೂ ಜೋಗುಳದ ಲಯ ಮರೆಯಲಾದೀತೆ). ‘ರಂಗೀಲಾ’ ಸಿನಿಮಾದಲ್ಲಿ ಮಸಾಲೆ ಅರೆದು, ಅಮೀರ್ ಖಾನ್‌ಗೆ ಜೀವಾನಿಲ ಕೊಟ್ಟವರು ಅವರು. ‘ಸತ್ಯ’ ಹಿಂದಿ ಚಿತ್ರದಿಂದ ಮನೋಜ್ ವಾಜಪೇಯಿ ಅವರೊಳಗಿನ ಕಾವನ್ನು ಹೊರಗೆಳೆದದ್ದನ್ನೂ ಮರೆಯುವ ಹಾಗಿಲ್ಲ. ‘ಕಂಪನಿ’, ‘ಸರ್ಕಾರ್’ ಸರಣಿ ಚಿತ್ರಗಳು ಹಿಂದಿ ಚಿತ್ರರಂಗವನ್ನು ‘ವರ್ಮಾ’ ಹೇಗೆ ತಮ್ಮ ಆಡುಂಬೊಲ ಮಾಡಿಕೊಂಡರೆನ್ನುವುದಕ್ಕೆ ಸಾಕ್ಷಿ. ಅವರು ಸಿನಿಮಾಗಳನ್ನು ಮಾಡುವ ‘ಫ್ಯಾಕ್ಟರಿ’ ಹೆಸರಿನಲ್ಲಿ ತಮ್ಮದೇ ಕಂಪನಿ ಶುರುಮಾಡಿದ್ದು ಈಗ ಅಚ್ಚರಿ ಎನಿಸದೇ ಇರಬಹುದು. ದಕ್ಷಿಣ ಭಾರತದ ಸಿನಿಮಾಗಳನ್ನು ವಾರೆಗಣ್ಣಿನಿಂದ ನೋಡುತ್ತಾ, ‘ಮದ್ರಾಸಿ’ಗಳೆಂದು ಸಾಮಾನ್ಯೀಕರಿಸಿ ಸಂಬೋಧಿಸುತ್ತಾ, ಸಿನಿಮಾ–ಜಾಹೀರಾತುಗಳಲ್ಲಿ ಸಾಧ್ಯವಿರುವ ಕಡೆಯಲ್ಲೆಲ್ಲ ದಕ್ಷಿಣ ಭಾರತೀಯರನ್ನು ಸರಳೀಕರಿಸಿ ತಮಾಷೆಯ ಸರಕಾಗಿಸಿದ್ದವರ ಕೋಟೆಯೊಳಗೇ ವರ್ಮಾ ಒಂದು ಸಿಂಹಾಸನವನ್ನು ಹಾಕಿಕೊಂಡು ಕುಳಿತಿದ್ದರು.

ಈಗ ಅಂತಹ ಸಿಂಹಾಸನಗಳ ಸಂಖ್ಯೆ ಏರುತ್ತಿದೆ